I. P. Set lying idle in Yelburga Taluk due to Non-Supply of electricity

96. **Sri PRABHU RAJ PATIL** Yelburga).—

Will the Minister for Public Works and Electricity be pleased to state:—

(*a*) whether it has come to the notice of the Government that 314 I. P. Sets distributed through loans sanctioned by Raichur District Co-operative Societies are lying idle in Yelburga Taluk due to non-Supply of electricity even after lapse of three years :

(*b*) if so, the reasons for the delay ;

(*c*) the action taken by the Government in this behalf (towards supply of electricity) so far ?

Sri H. M CHANNABASAPPA (Minister for Public Works and Electricity).—

(*a*) No.

(*b*) Does not arise in view of reply to clause (*a*) above.

(*c*) Mysore State Electricity Board will take immediate steps if any applicant to whom power is sanctioned comes forward with completion reports, agreements etc.

ಶ್ರೀ ಪ್ರಭುರಾಜ್ ಪಾಟೀಲ್.—ನನ್ನ ಪ್ರಶ್ನೆಗೆ ಸಂಬಂಧಪಟ್ಟ ಅಧಿಕಾರಿಗಳಿಂದ ಒಂದು ವರದಿಯನ್ನೇನಾದರೂ ತಾವು ತರಿಸಿಕೊಂಡಿದ್ದೀರಾ ? ತರಿಸಿಕೊಂಡಿದ್ದರೆ ಅದನ್ನು ಈ ಮನೆಯ ಮುಂದೆ ಇಡುತ್ತಿದ್ದೀರಾ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ವರದಿಯನ್ನು ತರಿಸಿಕೊಂಡು ಅದರ ಆಧಾರದ ಮೇಲೆಯೇ ಉತ್ತರ ಕೊಟ್ಟಿದ್ದೇವೆ.

ಶ್ರೀ ಪ್ರಭುರಾಜ್ ಪಾಟೀಲ್.—314 ಪಂಪ್‌ಸೆಟ್‌ಗಳನ್ನು ಆಗಿನ ಮುಖ್ಯ ಮಂತ್ರಿಗಳು ಜನರಿಗೆ ಹಂಚುತ್ತ, ನಿಮಗೆ ಬೇಗ ವಿದ್ಯುತ್ತನ್ನು ತರಿಸಿಕೊಡುತ್ತೇವೆಂದು ಆಶ್ವಾಸನೆ ಕೊಟ್ಟರು. ಪಂಪ್‌ಸೆಟ್ ತೆಗೆದುಕೊಂಡು ಮೂರು ವರ್ಷಗಳಾದರೂ ಕೂಡ ವಿದ್ಯುತ್ತನ್ನು ತರಿಸಿಕೊಟ್ಟಿಲ್ಲ ಎನ್ನುವ ಮಾತನ್ನು ಒಪ್ಪುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—314 ಜನ ವಿದ್ಯುತ್ತನ್ನು ಪಡೆಯುತಕ್ಕ ಆಶ್ವಾಸನೆಯನ್ನು ಪಡೆದಿದ್ದು, ಅವರು ಅದಕ್ಕೆ ಬೇಕಾದ ಕಾರ್ಯಕ್ರಮಗಳನ್ನು ಮಾಡಿದ್ದರೆ 314 ಸೆಟ್‌ಗಳಿಗೂ ವಿದ್ಯುತ್ತನ್ನು ಕೊಡುತ್ತಿದ್ದೆವು.

ಶ್ರೀ ಪ್ರಭುರಾಜ್ ಪಾಟೀಲ್.—314 ಪಂಪ್‌ಸೆಟ್‌ಗಳನ್ನು ಹಂಚುವಾಗ ಬೇಗನೇ ವಿದ್ಯುತ್ತನ್ನು ಕೊಡುತ್ತೇವೆಂದು ಸರ್ಕಾರದವರು ಆಶ್ವಾಸನೆಯನ್ನು ಕೊಟ್ಟು ಆ ರೀತಿ ವಿದ್ಯುತ್ತನ್ನು ಪೂರೈಸಿಕೊಡಲಲ್ಲ ಅದರಲ್ಲಿ ಜನತೆಯ ತಪ್ಪು ಏನೂ ಇಲ್ಲ, ಸರ್ಕಾರದ್ದೇ ದೋಷವಿದೆ ಎಂದು ತೋರಿಸಿಕೊಟ್ಟರೆ ವಿದ್ಯುತ್ತನ್ನು ಪೂರೈಸಿದ ತಾರೀಖಿನಿಂದ ಬಡ್ಡಿ ತೆಗೆದುಕೊಳ್ಳಬೇಕು ಮತ್ತು ಅಸಲನ್ನು ಕೂಡ ಅದೇ ದಿವಸದಿಂದ ವಸೂಲು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಎಲೆಕ್ಟ್ರಿಸಿಟಿ ಬೋರ್ಡಿನವರು ವಿದ್ಯುಚ್ಛಕ್ತಿ ಕೊಡುವುದಕ್ಕೂ, 314 ಜನ ಅರ್ಜಿದಾರರು ಸಾಲ ತೆಗೆದುಕೊಳ್ಳುವುದಕ್ಕೂ ಸಂಬಂಧವಿಲ್ಲ. ಎರಡನೆಯದು, ಸರ್ಕಾರದವರು ಆಶ್ವಾಸನೆ ಕೊಡತಕ್ಕದ್ದು, ಅರ್ಜಿದಾರರು ಬಾವಿ ತೆಗೆದಿದ್ದೇವೆನ್ನುವ ಸರ್ಟಿಫಿಕೇಟ್ ಕೊಟ್ಟು ಅರ್ಜಿ ಹಾಕಿದರೆ ಆಗ ಸರ್ಕಾರದವರು ವಿದ್ಯುಚ್ಛಕ್ತಿ ಕೊಡಲು ಅಂದಾಜು ಮಡುತ್ತಾರೆ. ಅಂದಾಜು ಮಾಡಿದಾಗ ವಿದ್ಯುಚ್ಛಕ್ತಿಯನ್ನು ಕೊಡುವುದು ಎಕನಾಮಿಕಲ್ ಆಗುತ್ತದೆಯೋ ಇಲ್ಲವೋ ಮತ್ತು ಕೊಡುವುದು ಸಾಧ್ಯವೋ ಇಲ್ಲವೋ ಎನ್ನುವುದನ್ನು ತಿಳಿಸುತ್ತಾರೆ. ಹಾಗೆ ತಿಳಿಸಿದ ಮೇಲೆ ಅವರು ಒಂದು ಎಚ್. ಪಿ. ಗೆ 36 ರೂಪಾಯಿನಂತೆ ಡಿಪಾಜಿಟ್ ಕಟ್ಟಿ, ಮೂರು ರೂಪಾಯಿ ಛಾಪಾ ಕಾಗದದ ಮೇಲೆ ಅಗ್ರಿಮೆಂಟ್ ಬರೆದು ಕೊಟ್ಟರೆ ಬರೆದು ಕೊಟ್ಟಾದಮೇಲೆ ಅವರು ತಮ್ಮ ಭಾಗದ ಕೆಲಸವೇನಿದೆ, ಪಂಪ್ ಹೌಸ್ ಕಟ್ಟುವುದು; ವೈರಿಂಗ್ ಕೆಲಸ ಮಾಡುವುದು ಇದನ್ನೆಲ್ಲಾ ಮಾಡಿ, ಕಂಟ್ರಾಕ್ಟರಿಂದ ಕ್ಲಿಯರೆನ್ಸ್ ಸರ್ಟಿಫಿಕೇಟ್ ತಂದುಕೊಟ್ಟರೆ, ಕೊಟ್ಟಮೇಲೆ ಅತ್ಯಲ್ಪ ಕಾಲದಲ್ಲಿ ವಿದ್ಯುಚ್ಛಕ್ತಿಯನ್ನು ಕೊಡುತ್ತೇವೆ.

1-30 P.M.

ಶ್ರೀ ಆರ್. ಎಸ್. ಪಾಟೀಲ್.—ಹಿಂದಿನ ಸರ್ಕಾರದವರು ಕೊಟ್ಟ ಆಶ್ವಾಸನೆ ಮೇಲೆ 3-4 ಪರ್ಸೆಂಟ್ ಬಡ್ಡಿಮೇಲೆ ಸಾಲವನ್ನು ಬ್ಯಾಂಕಿನಿಂದ ಪಡೆದು ಪಂಪುಸೆಟ್ಟುಗಳನ್ನು ಇನ್‌ಸ್ಟಾಲ್ ಮಾಡಿದ್ದರೂ ಎಂ. ಎಸ್. ಇ. ಬಿ. ಯಿಂದ ವಿದ್ಯುಚ್ಛಕ್ತಿ ಬರದಿದ್ದರೆ ಈ ತಪ್ಪಿಗೆ ಯಾರು ಹೊಣೆ ? ಜನರಮೇಲೆ ಬೀಳುವ ಬಡ್ಡಿಗೆ ಯಾರು ಜವಾಬ್ದಾರರು ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಯಾರಿಗಾದರೂ ಆಶ್ವಾಸನೆ ಕೊಟ್ಟು ವಿದ್ಯುಚ್ಛಕ್ತಿ ಮುಂಜೂರು ಆಗಿ ಕೊಡದೇ ಹೋಗಿದ್ದರೆ, ಅವರ ಮೇಲೆ ಸೂಕ್ತಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಮಾದೇಗೌಡ.—ವಿದ್ಯುಚ್ಛಕ್ತಿ ಮಂಡಲಿಯು ಫೀಸಿಬಲಿಟಿ ಸರ್ಟಿಫಿಕೇಟ್ ಕೊಟ್ಟಮೇಲೆ, ಬ್ಯಾಂಕಿನವರು ಸಾಲ ಕೊಟ್ಟನಂತರ ಪಂಪು ಸೆಟ್ಟುಗಳನ್ನು ಹಾಕಿ ವರ್ಷಾನುಗಟ್ಟಲೆ ಆದರೂ ಕೂಡಾ ಇನ್ನೂ ವಿದ್ಯುತ್ಚಕ್ತಿ ಸರಬರಾಜು ಆಗಿಲ್ಲ. ಬ್ಯಾಂಕಿನಿಂದ ಸಾಲ ಪಡೆದಿರತಕ್ಕ ರೈತನು ಎಲೆಕ್ಟ್ರಿಸಿಟಿ ಬರದಿದ್ದರೆ, ಕಂತು ಕೊಡಬೇಕಾದ ಅವಶ್ಯಕತೆ ಬಂದಿದೆ ಎಂದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಅಂಥ ಪರಿಸ್ಥಿತಿಯಲ್ಲಿ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ವಿದ್ಯುತ್ಚಕ್ತಿ ಸರಬರಾಜು ಮಾಡುವುದಕ್ಕೆ ಅವರು ಒಪ್ಪುವುದು ಯಾವಾಗ ಎಂದು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಅರ್ಜಿ ಕೊಟ್ಟುಬಿಟ್ಟು ಬಾವಿ ನನ್ನದು ಎಂದು ಸರ್ಟಿಫಿಕೇಟ್ ಕೊಟ್ಟರೆ ಸಾಲದು. ಅದಾದಮೇಲೆ ಅವರು ಬಂದು ಅಂದಾಜು ಮಾಡುತ್ತಾರೆ. ಅಂದಾಜು ಮಾಡುವಾಗ ಇಷ್ಟು ಹಾರ್ಸ್ ಪವರ್ ತೆಗೆದುಕೊಳ್ಳುತ್ತಾರೆ ಎಂದು ಲೆಕ್ಕಹಾಕಿ ನಮಗೆ ವರ್ಕ್‌ಬಲ್ ಆಗುತ್ತದೆ ಎಂದು ಕಂಡುಬಂದಾಗ ಅಂದಾಜು ಮಾಡುತ್ತಾರೆ.

ಶ್ರೀ ಆರ್. ಎಸ್. ಪಾಟೀಲ್.—ಕಂಟ್ರಾಕ್ಟರು ಆಗಿರತಕ್ಕವರು ವಿದ್ಯುಚ್ಛಕ್ತಿ ಮಂಡಲಿಯಿಂದ ಅನ್ಯಾಯವಾಗಿದೆ ಎಂದು ಹೇಳುತ್ತಾರೆ ಅಂಥ ಪರಿಸ್ಥಿತಿಯಲ್ಲಿ ಏನು ಕ್ರಮ ತೆಗೆದುಕೊಳ್ಳುತೀರಿ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಯಾವುದೋ ದೃಷ್ಟಿಯಲ್ಲಿ ಇಟ್ಟುಕೊಂಡು ಪ್ರಶ್ನೆ ಕೇಳಿದರೆ ಉತ್ತರ ಕೊಡುವುದಕ್ಕೆ ಆಗುವುದಿಲ್ಲ. ಸರ್ಕಾರದಿಂದ ಅಥವಾ ಎಂ.ಎಸ್.ಇ.ಬಿ. ಬೋರ್ಡಿನಿಂದ ಏನಾದರೂ ಕಾನೂನಿಗೆ, ವಿಧಿನಿಯಮಗಳಿಗೆ ವಿರುದ್ಧವಾಗಿ ಕ್ರಮ ನಡೆದಿದ್ದರೆ ಅತ್ಯಗತ್ಯವಾಗಿ ಸೂಕ್ತವಾದ ಕ್ರಮ ತೆಗೆದುಕೊಳ್ಳುತ್ತೇನೆ. ಊಹಾಪೋಹದ ಮೇಲೆ ಏನು ಮಾಡುತ್ತೀರಿ ಎಂದು ಕೇಳಿದರೆ ಉತ್ತರ ಕೊಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಮಾದೇಗೌಡ.—ಮೈಸೂರು ಡಿಸ್ಟ್ರಿಕ್ಟಿನಲ್ಲಿ ಟಿ. ನರಸೀಪುರ ತಾಲ್ಲೂಕಿನಲ್ಲಿ ಕೆಂಪೇಹೊಂಡಿ ಗ್ರಾಮ ಇದೆ. ಹಣಕೊಟ್ಟು ಒಂದು ವರ್ಷ ಆಗಿದ್ದರೂ ಎಲೆಕ್ಟ್ರಿಸಿಟಿ ಸ್ಯಾಂಕ್ಷನ್ ಮಾಡಿದ್ದರೂ ಕೂಡ ಎಲೆಕ್ಟ್ರಿಸಿಟಿ ಕೊಟ್ಟಿಲ್ಲ. ರೈತರಿಗೆ ಹಣ ಕೊಟ್ಟಿರತಕ್ಕ ಬ್ಯಾಂಕು ಮರುಪಾವತಿ ಮಾಡಬೇಕು ಎಂದು ನೋಟೀಸ್ ಕಳುಹಿಸಿದ್ದಾರೆ ಎಲೆಕ್ಟ್ರಿಸಿಟಿ ಮಾತ್ರ ಬಂದಿಲ್ಲ ಪಂಪುಸೆಟ್ಟು ಅಲ್ಲೇ ಬಿದ್ದಿದೆ.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಸ್ಯಾಂಕ್ಷನ್ ಮಾಡಿದ ತಕ್ಷಣ ವಿದ್ಯುಚ್ಛಕ್ತಿ ಅವರಿಗೆ ಬರುವದಿಲ್ಲ ಸ್ಯಾಂಕ್ಷನ್ ಮಾಡಿದಮೇಲೆ ಪವರ್ ಹೌಸ್ ಕಟ್ಟಿ ಅವರು ಕಂಟ್ರಾಕ್ಟರಿಂದ ವೈರಿಂಗ್ ಮಾಡಿಸಿ ಕಂಪ್ಲೀಷನ್ ಸರ್ಟಿಫಿಕೇಟ್ ತಂದುಕೊಟ್ಟಕೂಡಲೆ ಕೊಡುತ್ತೇವೆ.

ಶ್ರೀ ಬಾಪುಗೌಡ ರಾಯಪ್ಪ.—ಯಲಬುರ್ಗ ತಾಲ್ಲೂಕಿನಲ್ಲಿ 314 ಐ.ಪಿ. ಸೆಟ್ಟುಗಳು ರೈತರಿಗೆ ಸಹಕಾರ ಸಂಘಗಳ ಮುಖಾಂತರ ಕೊಡಲ್ಪಟ್ಟಿದೆ. ರೈತರಿಗೆ ಸಹಕಾರ ಸಂಘಗಳ ಮುಖಾಂತರ ಐ. ಪಿ. ಸೆಟ್ಟುಕೊಡುವ ಕಾಲಕ್ಕೆ ಫೀಸಿಬಿಲಿಟಿ ಸರ್ಟಿಫಿಕೇಟ್ ಕೊಡುತ್ತಾರೆ. ಐ. ಪಿ. ಸೆಟ್ಟಿಗೆ ಕರೆಂಟು ಕೊಡುತ್ತೇವೆ ಎನ್ನತಕ್ಕ ಮಾತನ್ನು ಎರೆಕ್ಟಿಸಿಟಿ ಡಿಪಾರ್ಟ್‌ಮೆಂಟಿನವರು ಹೇಳುತ್ತಾರೆ. ಅದಾದನಂತರ ಐ.ಪಿ. ಸೆಟ್ಟು ಮುಂಜೂರಾಗುತ್ತದೆ. ಇಂಥ ಐ. ಪಿ. ಸೆಟ್ಟುಗಳು 314 ಹಂಚಿದ್ದರೂ ಇಲ್ಲಯವರೆಗೆ ಅವರಿಗೆ ಕರೆಂಟು ಸಿಕ್ಕಿಲ್ಲ. ಈ ವಿಷಯದಲ್ಲಿ ಅಧಿಕಾರಿಯನ್ನು ಕಳಿಸಿ ತನಿಖೆ ಮಾಡಿಸಿ ಇದು ಎಂ. ಎಸ್. ಇ. ಬಿ. ಯವರ ತಪ್ಪು ಇದ್ದಲ್ಲಿ ರೈತರಿಗೆ ಲುಕ್ಸಾನನ್ನು ಸರ್ಕಾರ ಭರ್ತಿಮಾಡುತ್ತದೆಯೆ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಉತ್ತರ ಕೊಡುವಾಗ ಎರ್ಲಾ ಅಂಶಗಳನ್ನು ಖಚಿತಪಡಿಸಿ ಕೊಂಡು ತನಿಖೆ ನಡೆಸಿ ನಿಮಗೆ ಅಧಿಕೃತವಾಗಿ ಉತ್ತರ ಕೊಡುತ್ತೇವೆ. 314 ಪಂಪುಗಳಿಗೆ ನನಗೆ ಬಂದಿರುವ ವರದಿ ಪ್ರಕಾರ ಅವರು ತೆಗೆದುಕೊಂಡಿರುವ ಸಾಲಕ್ಕೂ ಎಂ. ಎಸ್. ಇ. ಬಿ. ಗೂ ಸಂಬಂಧವಿಲ್ಲ.

ಶ್ರೀ ಬಾಪೂಗೌಡ ರಾಯಪ್ಪ.—ಎಂ. ಎಸ್. ಇ. ಬಿ. ಯಿಂದ ಫೀಸಿಬಿಲಿಟಿ ಸರ್ಟಿಫಿಕೇಟ್ ಹೋಗದೆ ರೈತನಿಗೆ ಸಾಲ ಸಿಗುವುದಿಲ್ಲ ಎಂಬುದು ತಮಗೆ ಗೊತ್ತಿದೆಯೋ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ನಮಗೆ ಅನಧಿಕೃತವಾಗಿ ತಿಳಿದುಬಂದಿರುವ ಪ್ರಕಾರ ಈ 314 ಪಂಪು ಸೆಟ್ಟುಗಳಿಗೆ ಏನು ಸಾಲ ತೆಗೆದುಕೊಂಡಿದ್ದಾರೆಂದು ಹೇಳಿದ್ದಾರೆ, ಅದರ ಪೈಕೆ 257ಕ್ಕೆ ಈಗಾಗಲೇ ಸರ್ವೀಸ್ ಕೊಟ್ಟು ಆಗಿಹೋಗಿದೆ. ಇನ್ನು 57 ಜನ ಸರ್ವೀಸ್ ತೆಗೆದುಕೊಂಡಿಲ್ಲ. ತೆಗೆದುಕೊಳ್ಳದೆ ಇರತಕ್ಕದ್ದಕ್ಕೆ ಕಾರಣಗಳು ಮೂರರಲ್ಲಿ ಒಂದು ಇರಬಹುದು. ಸಾಲ ತೆಗೆದು ಕೊಂಡಿರತಕ್ಕವರು ಪಂಪುಸೆಟ್ಟುಗಳು ಇನ್ಸಾಟಲ್ ಮಾಡುವುದಕ್ಕೆ ನಿಶ್ಯಕ್ತರಾಗಿರಬಹುದು ; ಇಲ್ಲದೆ ಹೋದರೆ ಸಾಲ ತೆಗೆದುಕೊಂಡಿರುವವರು ಪಂಪುಸೆಟ್ಟುಗಳನ್ನು ಮಾರಾಟಮಾಡಿರಬಹುದು; ಇಲ್ಲವೇ ಸಾಲ ತೆಗೆದುಕೊಂಡು ಪಂಪು ಸೆಟ್ಟು ರಿಸೀವ್ ಮಾಡದೇ ಇರಬಹುದು. ಯಾವ ಕಾರಣದಿಂದ ನಿಂತಿದೆ ಎಂಬುದು ಅವರು ಮಾಡಿರುವ ವರದಿ ಪ್ರಕಾರ ಸರ್ಕಾರದ ಗಮನಕ್ಕೆ ಬಂದಿಲ್ಲ. ಎಂ. ಎಸ್. ಇ. ಬಿ. ಯಲ್ಲಿ ಲೋಪದೋಷ ಇದ್ದರೆ ಅದನ್ನು ತೋರಿಸಬಹುದು ಅಗತ್ಯವಾಗಿ ಸೂಕ್ತಕ್ರಮ ತೆಗೆದು ಕೊಳ್ಳುತ್ತೇವೆ.

Receipt and Expenditure on State Lotteries

101. **Sri T. R. SHAMANNA (Fort).**—

Will the Minister for Finance be pleased to state:—

(*a*) the total receipt (month-war) collected by Government from the sale of lotteries from the date of commencement of lotteries upto the latest convenient date ;

(*b*) the total expenditure incurred including the prize amount etc., during the above period ?